**ಸಾಕ್ಷಿಯನ್ನು ದಿಃ 03.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿಯ ಪರ ಶ್ರೀ ಎಮ್ ಎನ್ ಬಿ ವಕೀಲರಿಂದಃ**

ಈಗ ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ಸಹಿಯನ್ನು ಹಾಕಿರುತ್ತೇನೆ.

**ಈ ಕೆಳಗಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.**

- ನಿಪಿ-**1-** ದಿಃ **23.05.2022** ರ ಮೂಲ ಸ್ವಾಧೀನರಹಿತ ಕ್ರಯದ ಒಪ್ಪಂದದ ಕರಾರು ಪತ್ರ
- ನಿಪಿ-**1**(ಎ)- ನಿಪಿ-**1** ರಲ್ಲಿರುವ ವಾದಿಯ ಸಹಿ
- ನಿಪಿ-**1**(ಬಿ) ಯಿಂದ **1**(ಎಫ್)- ನಿಪಿ-**1** ರಲ್ಲಿರುವ ಪ್ರತಿವಾದಿಯರ ಸಹಿಗಳು
- ನಿಪಿ-**2**- ಪಹಣಿ ಪತ್ರಿಕೆ
- ನಿಪಿ-**3**- ದಿಃ **20.07.2024** ರ ತಿಳುವಳಿಕೆ ಪತ್ರದ ಕಛೇರಿ ಪ್ರತಿ
- ನಿಪಿ-**4** ರಿಂದ **8**- ಅಂಚೆ ರಶೀದಿಗಳು
- ನಿಪಿ-**9** ಮತ್ತು **10**- ಅಂಚೆ ಸ್ವೀಕೃತಿ
- ನಿಪಿ -11 ರಿಂದ ನಿಪಿ-13-ಆರೋಪಿಗೆ ನೀಡಿದ ನೋಟೀಸ್ ಜಾರಿಯಾಗದೇ ವಾಪಸಾಗಿದ್ದು, ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾದ ಅಂಚೆ ಲಕೋಟೆ
- ನಿಪಿ-11(ಎ) ಯಿಂದ ನಿಪಿ-13(ಎ) ಅಂಚೆ ಲಕೋಟೆಯೊಳಗಿನ ನೋಟೀಸ್ ಮೂಲ ಪ್ರತಿ.

**ಪ್ರತಿವಾದಿಯರು ಏಕಪಕ್ಷೀಯವಾಗಿರುವುದರಿಂದ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**